**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ**
**ಶಹಾಪೂರ**
**ಸಿ.ಸಿ ನಂಃ 1413/2022**

**ಫಿರ್ಯಾದಿದಾರಃ** ಕರ್ನಾಟಕ ಸರ್ಕಾರ ಶಹಾಪೂರ ಠಾಣೆ ಪೊಲೀಸರು.
// ವಿರುದ್ಧ //

**ಆರೋಪಿ ನಂ.1 :** ಶ್ರೀಶೈಲ ತಂದೆ ಹಣಮಂತ ನಾಯಿಕೋಡಿ
ವಯಾಃ 20 ವರ್ಷ, ಉಃ ಅಟೋ ಚಾಲಕ
ಸಾಃ ಸುಂಬಡ, ತಾಃ ಯಡ್ರಾಮಿ, ಜಿಃ ಕಲಬುರ್ಗಿ.

**ಆರೋಪಿ ನಂ.2 :** ಮಲ್ಲಿಕಾರ್ಜುನ ತಂದೆ ಮಾರುತಿ ತಳವಾರ
ವಯಾಃ ೪೧ ವರ್ಷ, ಉಃ ಕೂಲಿ ಕೆಲಸ
ಸಾಃ ಬೆಡಪಳ್ಳಿದ, ತಾಃ ಚಿಂಚೋಳಿ, ಜಿಃ ಕಲಬುರ್ಗಿ.

**ದಂಡ ಪ್ರಕ್ರೀಯಾ ಸಂಹಿತೆ ಕಲಂಃ 313 ರಡಿಯಲ್ಲಿ ಆರೋಪಿತರ ಹೇಳಿಕೆ.**

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

ಆರೋಪಿತರ ಉತ್ತರಃ

ಪ್ರ-02. ಪ್ರಾಸಾ-1 ವಿಶಾಲಾಕ್ಷಮ್ಮ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ04.04.2022 ರಂದು ತಾನು ಮತ್ತು ತನ್ನ ಗಂಡ ಯಾದಗಿರಿಯಿಂದ ಗುಡ್ಡಾಪೂರಕ್ಕೆ ತಮ್ಮ ದ್ವಿ ಚಕ್ರ ವಾಹನ ನಂ.ಕೆಎ-33-ಕ್ಯೂ-5615 ರಲ್ಲಿ ಹೊಗುತ್ತಿರುವಾಗ ಗೋಗಿ ಗ್ರಾಮದಲ್ಲಿ ರಬ್ಬನಳ್ಳಿ ಕ್ರಾಸ ಇನೂ 300 ಮಿ. ದೂರ ಇರುವಾ ಗ ತಮ್ಮ ಮುಂದೆ ಕೆಎ-32-ಸಿ-2637 ನಂಬರನ ಅಟೋ ಹೊಗುತ್ತಿರುವಾಗ ಅಟೋ ಚಾಲಕನು ಅತಿವೇಗ ಮತ್ತು ಅಲಕ್ಷತನದಿಂದ ವಾಹನವನ್ನು ನಡೆಸಿಕೊಂಡು ಹೊಗುತ್ತಿದ್ದಾಗ ಮೃತ ತನ್ನ ಗಂಡ ತಮ್ಮ ಸ್ಕೂಟಿಯನ್ನು ಬಲಗಡೆ ಸೈಡಿನಲ್ಲಿ ಹೊಗುತ್ತಿರುವಾಗ ಒಮ್ಮಿಲ್ಲದೊಮೆ ಅಟೋ ಚಾಲಕನು

ತಮ್ಮ ಸ್ಕೂಟಿಗೆ ಡಿಕ್ಕಿ ಪಡಿಸಿರುತ್ತಾನೆ. ಡಿಕ್ಕಿ ಪಡಿಸಿದ ಪರಿಣಾಮ ತಾನು ಮತ್ತು ತನ್ನ ಮೃತ ಗಂಡ ರೋಡಿಗೆ ಬಿದ್ದಿರುತ್ತೇವೆ. ರೋಡಿನ ಮೇಲೆ ಮೃತ ತನ್ನ ಗಂಡನ ತಲೆಗೆ ಬಲವಾದ ಪೆಟ್ಟು ಬಿದ್ದು ಮತ್ತು ತನ್ನ ಬಲಗೈ ಹಾಗೂ ಕಾಲು ಮತ್ತು ತಲೆಗೆ ಪೆಟ್ಟಾಗಿರುತ್ತದೆ. ತನ್ನ ಗಂಡನ ತಲೆಗೆ ಭಾರಿ ಒಳಪೆಟ್ಟಾಗಿ ಬಾಯಿಯಿಂದ ರಕ್ತ ಬಂದಿರುತ್ತದೆ. ನಂತರ ಚಿಕಿತ್ಸೆಗಾಗಿ ಅಂಬ್ಯೂಲೆನ್ಸನಲ್ಲಿ ಸರಕಾರಿ ಆಸ್ಪತ್ರೆಗೆ ಹೊಗುವಾಗ ಮಾರ್ಗ ಮಧ್ಯದಲ್ಲಿ ತನ್ನ ಗಂಡನು ಮೃತಪಟ್ಟಿರುವದಾಗಿ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ತಿಳಿಸಿರುತ್ತಾರೆ. ತನಗೆ ಬೂಜಕ್ಕೆ, ಕೈಗಳಿಗೆ, ಕಾಲುಗಳಿಗೆ ತರಚಿದ ಗಾಯಗಳು ಆಗಿರುತ್ತದೆ. ಸದರಿ ಅಪಘಾತವು 1 ನೇ ಆರೋಪಿತನ ತಪ್ಪಿ ನಿಂದ ಆಗಿರುತ್ತದೆ, ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿತರ ಉತ್ತರಃ

ಪ್ರ-03. ಫ್ರಾಸಾ-3 ಅಶ್ವಿನಪಟೇಲ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ04.04.2022 ರಂದು ಚಾಸಾ-1 ಮತ್ತು ಮೃತ ಪರೇಶಕುಮಾರ ಯಾದಗಿರಿಯಿಂದ ಗುಡ್ಡಾಪೂರಕ್ಕೆ ತಮ್ಮ ದ್ವಿಚಕ್ರ ವಾಹನ ನಂ.ಕೆಎ-33-ಕ್ಯೂ-5615 ರಲ್ಲಿ ಹೊಗುತ್ತಿರುವಾಗ ಗೋಗಿ ಗ್ರಾಮದಲ್ಲಿ ರಬ್ಬನಳ್ಳಿ ಕ್ರಾಸ ಇನ್ನೂ 300 ಮಿ. ದೂರ ಇರುವಾಗ ಕೆಎ-32-ಸಿ-2637 ನಂಬರನ ಅಟೋ ಹೊಗುತ್ತಿರುವಾಗ ಅಟೋ ಚಾಲಕನು ಅತಿವೇಗ ಮತ್ತು ಅಲಕ್ಷತನದಿಂದ ವಾಹನವನ್ನು ನಡೆಸಿಕೊಂಡು ಹೊಗುತ್ತಿದ್ದಾಗ ಮೃತ ಪರೇಶಕುಮಾರ ರವರ ಸ್ಕೂಟಿಯನ್ನು ಬಲಗಡೆ ಸೈಡಿನಲ್ಲಿ ಹೊಗುತ್ತಿರುವಾಗ ಒಮ್ಮಿಲ್ಲದೊಮೆ ಅಟೋ ಚಾಲಕನು ಸ್ಕೂಟಿಗೆ ಡಿಕ್ಕಿ ಪಡಿಸಿರುತ್ತಾನೆ. ಡಿಕ್ಕಿ ಪಡಿಸಿದ ಪರಣಮ ಚಾಸಾ-1 ಮತ್ತು ಮೃತ ಪರೇಶಕುಮಾರ ರವರು ರೋಡಿಗೆ ಬಿದ್ದಿರುತ್ತಾರೆ ಎಂದು ತನಗೆ ಚಾಸಾ-1 ರವರು ಕರೆ ಮಾಡಿ ತಿಳಿಸಿರುತ್ತಾರೆ. ನಂತರ ತಾನು ಅಪಘಾತವಾದ ಸ್ಥಳಕ್ಕೆ ಹೋಗಿ ನೋಡಲಾಗಿ ರೋಡಿನ ಮೇಲೆ ಮೃತ ಪರೇಶಕಕುಮಾರ ತಲೆಗೆ ಪೆಟ್ಟಾಗಿರುತ್ತದೆ, ಮೃತ ಪರೇಶಕುಮಾರ ತಲೆಗೆ ಭಾರಿ ಒಳಪೆಟ್ಟಾಗಿ ಬಾಯಿಯಿಂದ ರಕ್ತ ಬಂದಿರುತ್ತದೆ, ನಂತರ ಚಿಕಿತ್ತೆಗಾಗಿ ಅಂಬ್ಯೂಲೆನ್ಸನಲ್ಲಿ ಸರಕಾರಿ ಆಸ್ಪತ್ರೆಗೆ

ಹೋಗುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿರುವದಾಗಿ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ತಿಳಿಸಿರುತ್ತಾರೆ. ಚಾಸಾ-1 ರವರ ಬೂಜಕ್ಕೆ, ಕೈಗಳಿಗೆ, ಕಾಲುಗಳಿಗೆ ತರಚಿದ ಗಾಯಗಳು ಆಗಿರುತ್ತದೆ. ಸದರಿ ಅಪಘಾತವು 1 ನೇ ಆರೋಪಿತನ ತಪ್ಪಿ ನಿಂದ ಆಗಿರುತ್ತದೆ, ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿತರ ಉತ್ತರಃ

ಪ್ರ-04. ಪ್ರಾಸಾ-8 ಚನ್ನಯ್ಯ ಹೀರೆಮಠ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 05.04.2022 ರಂದು ಚಾಸಾ-17 ರವರಿಂದ ಸದರಿ ಪ್ರಕರಣದ ಕಡತವನ್ನು ವಹಿಸಿಕೊಂಡಿರುತ್ತೇನೆ. ಅದೇ ದಿವಸ ಚಾಸಾ-14 ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿಃ 06.04.2022 ರಂದು ಚಾಸಾ-9 ಮತ್ತು 10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿಃ 10.04.2022 ರಂದು ಚಾಸಾ-1 ರವರ ಗಾಯಾದ ಪರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ, ದಿಃ 12.04.2022 ರಂದು ಅಪಘಾತದಲ್ಲಿ ಭಾಗಿಯಾದ ವಾಹನದ ಐ.ಎಂ.ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 13.04.2022 ರಂದು ಮೃತನ ಪಿಎಂ ವರದಿಯನ್ನು ಸರಕಾರ ಆಸ್ಪತ್ರೆ ಶಹಾಪೂರದಿಂದ ಪಡೆದುಕೊಂಡಿರುತ್ತೇನೆ, ದಿಃ29.04.2022 ರಂದು ಕೆಎ-33-ಕ್ಯೂ-5615 ರ ಸ್ಕೂಟಿ ಮಾಲೀಕರಾದ ಚಾಸಾ-1 ರವರು ಕಚೇರಿಗೆ ಹಾಜರಾಗಿ ಅವರಿಗೆ ಕಲಂ.133 ರಡಿಯಲ್ಲಿ ನೋಟಿಸಿ ಜಾಗಿ ಮಾಡಿ ಉತ್ತರ ಪಡೆದು ಸೂಕ್ತ ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರಿಗೆ ಒಪ್ಪಿಸಿರುತ್ತೇನೆ. ದಿಃ 30.04.2022 ರಂದು ಆರೋಪಿಯ ವಾಹನ ಮಾಲೀಕರಿಗೆ ಕಲಂ.133 ರಲ್ಲಿ ನೋಟಿಸ ಜಾರಿ ಮಾಡಿ ಉತ್ತರ ಪಡೆದು ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರಿಗೆ ಒಪ್ಪಿಸಿರುತ್ತೇನೆ. ದಿಃ 10.05.2022 ರಂದು 1 ನೇ ಆರೋಪಿತನು ಠಾಣೆಗೆ ಹಾಜರಾಗಿದ್ದು ಆತನನ್ನು ದಸ್ತಗಿರಿ ಮಾಡಿ ವಿಚಾರಿಸಿಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾನೆ. ದಿಃ 16.06.2022 ರಂದು ಚಾಸಾ-16 ರವರಿಂದ ಕಲಂ 65 (ಬಿ) ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾನೆ.

ಚಾಸಾ15 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾನೆ, ಇಬ್ಬರೂ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾನೆ, ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿತರ ಉತ್ತರಃ

ಪ್ರ-05. ಫ್ರಾಸಾ-9 ಡಾ.ಗಂಗಾಧರ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 04.04.2022 ರಂದು ಬೆಃ10.45 ರಿಂದ ಮಃ12.00 ಗಂಟೆಗೆಯವರೆಗೆ ಸದರಿ ರಸ್ತೆ ಅಪಘಾತದಲ್ಲಿ ಮೃತ ಪಟ್ಟ ಪರೇಶ ಕುಮಾರ ಎನ್ನುವ ಶವ ಗೋಗಿ ಪೋಲಿಸರ ವಿನಂತಿಯ ಮೇರೆಗೆ ಶವ ಪರೀಕ್ಷೆ ಕೈಗೊಂಡು ಅದಕ್ಕೆ ಸಂಬಂಧಿಸಿದಂತೆ ಶವ ಪರೀಕ್ಷೆಯ ವರದಿಯನ್ನು ನೀಡಿರುತ್ತಾನೆ, ಸದರಿ ಮೃತ ಪರೇಶ ಕುಮಾರನ ಮರಣವು ತನ್ನ ಅಭಿಪ್ರಾಯವು ತಲೆಗೆ ಗಂಭೀರ ಗಾಯವಾಗಿದ್ದರಿಂದ ಮೆದಳಿಗೆ ತೀವ್ರ ರಕ್ತ ಸ್ರವಾರದಿಂದ ಉಂಟಾಗಿರುತ್ತದೆ. ಸದರಿ ಮೃತನ ಸಾವು 6 ಗಂಟೆಯ ಒಳಗೆ ಆಗಿರುವ ಸಾಧ್ಯತೆ ಇರುತ್ತದೆ. ಸದರಿ ಮೃತನ ಶವ ಪರೀಕ್ಷೆಗೆ ಸಂಬಂಧಿಸಿದಂತೆ ಅವ ಪರೀಕ್ಷಯ ವರದಿಯನುನ ನೀಡಿರುತ್ತೇನೆ, ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿತರ ಉತ್ತರಃ

ಪ್ರ-06. ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರ-07. ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

(ಈ ಮೇಲೆ ಹೇಳಿದ ಎಲ್ಲಾ ಸಾಕ್ಷಿಗಳ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃಢೀಕರಿಸಲಾಯಿತು.)

ದಿನಾಂಕಃ
ಸ್ಥಳಃ ಶಹಾಪೂರ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ಶಹಾಪೂರ.